ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸದರಿ ಕಟ್ಟಡದ ಕಾಮಗಾರಿಯು ಯಾವಾಗ ಪ್ರಾರಂಭವಾಗಿ ಯಾವಾಗ ಮುಕ್ತಾಯವಾಗುತ್ತದೆ ಎಂದು ಕೇಳಿದ್ದಕ್ಕೆ ಜರ್ಮನ್ ಸರ್ಕಾರದ ಸಹಯೋಗದ ಯೋಜನೆಯಡಿ ಶೀಘ್ರವಾಗಿ ಕಟ್ಟಲು ಪ್ರಾರಂಭಿಸಲಾಗುವುದು ಎಂದು ತಿಳಿಸಿದ್ದಾರೆ. ಆದ್ದರಿಂದ ದಿನಾಂಕವನ್ನು ನಿಖರವಾಗಿ ಹೇಳಿದರೆ ಅನುಕೂಲವಾಗುತ್ತದೆ ಎಂದು ಕೇಳಲಪೇಕ್ಷಿಸುತ್ತೇನೆ.

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, ಸುಮಾರು 80 ಕೋಟಿ ರೂ.ಗಳ ಜರ್ಮನ್ ಯೋಜನೆಯು ಗುಲ್ಬರ್ಗ ವಿಭಾಗಕ್ಕೆ ಮಂಜೂರಾಗಿದ್ದು, ಮೊದಲನೇ ಹಂತದಲ್ಲಿ 26 ಮತ್ತು ಎರಡನೇ ಹಂತದಲ್ಲಿ 25 ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲು ಮಂಜೂರಾತಿ ಆಗಿದೆ. ಮೊದಲನೇ ಹಂತದಲ್ಲಿ ಲಿಂಗಸಗೂರಿನ 30 ಬೆಡ್‌ಗಳ ಆಸ್ಪತ್ರೆಯನ್ನು 100 ಬೆಡ್‌ಗಳಿಗೆ ಏರಿಸುವುದು ಇದೆ.

ಅಧ್ಯಕ್ಷರು: ಅವರಿಗೆ ಅಷ್ಟೆಲ್ಲಾ ಸವಿಸ್ತಾರವಾದ ಉತ್ತರವು ಬೇಕಾಗಿಲ್ಲ. ವಾತಾವರಣವು ಹೀಗೆ ಇದೆ. ನಮ್ಮ ಕ್ಷೇತ್ರದಲ್ಲಿ ಈ ಆಸ್ಪತ್ರೆಯ ಕೆಲಸವು ಬೇಗ ಆಗಬೇಕು. ಅದರ ಕೀರ್ತಿ ತಮಗೆ ಸಲ್ಲಬೇಕೆಂಬುದು ನಮ್ಮ ಆಸೆ ಎಂದು ಹೇಳಿ.

ಡಾ॥ ಹೆಚ್. ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೇ, ಏಪ್ರಿಲ್ ಈ ಬೃಹತ್ ಯೋಜನೆಯು ಗ್ರಾ್ಯಂಟ್ ಆಗಿ 85 ಪರ್‌ಸೆಂಟ್‌ನಷ್ಟು ಅಂದರೆ 80 ಕೋಟಿ ರೂ.ಗಳನ್ನು ಕೋಟ್ಟಿದ್ದಾರೆ. ಅದು ಉತ್ತರ ಕರ್ನಾಟಕದ ಭಾಗಕ್ಕೆ ಏಪ್ರಿಲ್‌ನಲ್ಲ ಇದನ್ನು ಲಾಂಚ್ ಮಾಡುತ್ತೇವೆ.

ಅಧ್ಯಕ್ಷರು: ಶುರು ಮಾಡುತ್ತಾರೆ, ತೊಂದರೆ ಇಲ್ಲ.

ಪಾಂಡವಪುರದಲ್ಲಿ ಸರ್ಕಾರಿ ಕಾಲೇಜ್ ಮಂಜೂರಾತಿ

102 (720) ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಪಾಂಡವಪುರ ತಾಲ್ಲೂಕು ಮಂಡ್ಯ ಜಿಲ್ಲೆಯ ಉಪ ವಿಭಾಗದ ಮುಖ್ಯ ಕೇಂದ್ರವಾಗಿದ್ದು ಸರ್ಕಾರಿ ಪ.ಪೂ. ಕಾಲೇಜು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡದಿರಲು ಕಾರಣವೇನು?

2) 1998-99 ನೇ ಸಾಲಿನಲ್ಲಿ ಸರ್ಕಾರಿ ಕಾಲೇಜುಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ: ಹೆಚ್. ಜಿ. ಗೋವಿಂದೇ ಗೌಡ (ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸಂಬಂಧಿಸಿದಂತೆ ಯಾವುದೇ ಬೇಡಿಕೆ ಸ್ವೀಕೃತವಾಗಿರುವುದಿಲ್ಲ.

ಪಾಂಡವಪುರ ತಾಲ್ಲೂಕಿನಲ್ಲಿ ಪ್ರಸ್ತುತ 4 ಖಾಸಗಿ ಹಾಗೂ 2 ಸರ್ಕಾರಿ ಪ.ಪೂ. ಕಾಲೇಜುಗಳಿವೆ. ಅದರಲ್ಲಿ 2 ಖಾಸಗಿ ಪ.ಪೂ ಕಾಲೇಜುಗಳು ಪಾಂಡವಪುರದಲ್ಲಿಯೇ ಇರುತ್ತವೆ. ಸದರಿ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನಿಸಿದಾಗ ಈಗ ಅಸ್ತಿತ್ವದಲ್ಲಿರುವ ಪ.ಪೂ. ಕಾಲೇಜುಗಳೇ ಸಾಕಾಗುವುದರಿಂದ ಇನ್ನೊಂದು ಪ.ಪೂ ಕಾಲೇಜಿನ ಅವಶ್ಯಕತೆ ಕಂಡು ಬರುವುದಿಲ್ಲ.

2) ಸರ್ಕಾರಿ ಪದವಿ ಕಾಲೇಜುಗಳ ಸ್ಥಾಪನೆ ಪರಿಶೀಲನೆಯಲ್ಲಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲು ಉದ್ದೇಶಿಸಿರುವುದಿಲ್ಲ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ಎರಡು ಉಪ ವಿಭಾಗಗಳಿವೆ. ಒಂದು ಮಂಡ್ಯ ಉಪ-ವಿಭಾಗ, ಇನ್ನೊಂದು ಪಾಂಡವಪುರ ಉಪ-ವಿಭಾಗ. ಅದರಲ್ಲಿ ಪದವಿಪೂರ್ವ ಕಾಲೇಜು ಇಲ್ಲ, ಪದವಿಗೆ ಸಂಬಂಧಪಟ್ಟ ಯಾವುದೇ ಕಾಲೇಜು ಇಲ್ಲದೇ ಇರುವುದರಿಂದ ಅವರು ಹೇಳುವಂತೆ ಅಲ್ಲಿ ಖಾಸಗಿ ಕಾಲೇಜು ಇರುವುದರಿಂದ ಸರಕಾರಿ ಕಾಲೇಜಿನ ಅವಶ್ಯಕತೆ ಇಲ್ಲ ಎಂದು ವಿದ್ಯಾರ್ಥಿಗಳ ಅಂಕಿ ಸಂಖ್ಯೆಗಳ ಆಧಾರವನ್ನು ಕೊಟ್ಟಿದ್ದಾರೆ. ನಿಜವಾಗಿಯೂ ಪಾಂಡವಪುರಕ್ಕೆ ಸರಕಾರಿ ಕಾಲೇಜಿನ ಅತ್ಯಾವಶ್ಯಕತೆ ಇದೆ. ಬಹಳ ಜನರು ಅಲ್ಲಿಂದ ಮೈಸೂರು ಶ್ರೀರಂಗಪಟ್ಟಣಕ್ಕೆ ಹೋಗುತ್ತಾ ಇದ್ದಾರೆ. ಆದ್ದರಿಂದ ತಾವುಗಳು ದಯಮಾಡಿ ಮುಂದಿನ ಸಾಲಿನಲ್ಲಿ ಪಾಂಡವಪುರಕ್ಕೆ ಒಂದು ಪದವಿಪೂರ್ವ ಕಾಲೇಜನ್ನಾದರೂ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ: ಮಾನ್ಯ ಅಧ್ಯಕ್ಷರೇ, ಕೊಡಲು ಸಾಧ್ಯವಿಲ್ಲ ಎನ್ನುವ ಪ್ರಶ್ನೆ ಇಲ್ಲ, ಫ್ಯಾಕ್ಟ್, ಫಿಗರ್ಸ್, ಇದರ ಆಧಾರದ ಮೇಲೆ ಕೊಡಬೇಕೆಂದು ಮಾಡುತ್ತಾರೆ. ತಾವು ಕೇಳತಕ್ಕಂಥಾದ್ದರಲ್ಲಿಯೂ ಧರ್ಮ ಇದೆ. ಶಾಸಕರಾಗಿರತಕ್ಕಂಥವರು ಅಲ್ಲಿಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಮನಸ್ಸಿಟ್ಟುಕೊಂಡು ಕೇಳುವುದು ಸರಿ. ಆದರೆ ನಾವೂ ಕೂಡ ನಮ್ಮ ಇತಿಮಿತಿಯಲ್ಲಿ ಎಲ್ಲಿ ಏನು ಕೊಡಬೇಕೆಂದು ಯೋಚನೆ ಮಾಡುವುದಾದರೆ ತಾವುಗಳು ತಪ್ಪು ತಿಳಿದುಕೊಳ್ಳದೇ ಹೋಗುವುದಾದರೆ, ಒಂದು ವಿವರವನ್ನು ಕೊಡುತ್ತೇನೆ. ವಿಜಯ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ 234 ಮಕ್ಕಳಿದ್ದಾರೆ. ಬಾಲಕಿಯರ ಪದವಿಪೂರ್ವ ಕಾಲೇಜು, ಪಾಂಡವಪುರದಲ್ಲಿ 189 ವಿದ್ಯಾರ್ಥಿಗಳಿದ್ದಾರೆ. ಜನಪರ ಸೇವಾ ಟ್ರಸ್ಟ್ ಪದವಿ ಪೂರ್ವ ಕಾಲೇಜು ಮೇಲುಕೋಟೆ ಇಲ್ಲಿ 87 ವಿದ್ಯಾರ್ಥಿಗಳಿದ್ದಾರೆ. ವಿಶ್ವೇಶ್ವರಯ್ಯ ಸ್ವತಂತ್ರ ಪದವೀಪೂರ್ವ ಕಾಲೇಜು ಕ್ಯಾತಹಳ್ಳಿ ಇಲ್ಲಿ 78 ವಿದ್ಯಾರ್ಥಿಗಳಿದ್ದಾರೆ. ಸರಕಾರಿ ಪದವಿ ಪೂರ್ವ ಕಾಲೇಜು, ಚಿನಕುರುಳಿ - ಇಲ್ಲಿ 26 ವಿದ್ಯಾರ್ಥಿಗಳಿದ್ದಾರೆ. ಸರಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಬೆಳ್ಳಾರಿ - ಇಲ್ಲಿ 39 ವಿದ್ಯಾರ್ಥಿಗಳಿದ್ದಾರೆ. ಇವೊತ್ತು ನಮ್ಮ ಶಾಸಕರು ಶಾಲೆಗಳನ್ನು ಕೇಳುವುದರಲ್ಲಿ ಧರ್ಮ ಮತ್ತು ನ್ಯಾಯ ಇದೆ. ಆದರೆ ನಾವು ಆಡಳಿತ ಮಾಡತಕ್ಕಂಥ ಜನ ಅವಶ್ಯಕತೆಯನ್ನು ಅರಿತುಕೊಂಡು ಕೆಲಸ ಮಾಡದಿದ್ದರೆ ಯಾರಿಗೋ ತೃಪ್ತಿಪಡಿಸಲು ಮಾಡಿದ ಹಾಗೆ ಆಗುವುದು ಬೇಡ. ನಿಮ್ಮ ಅವಶ್ಯಕತೆಯೂ ನಿಜವಾಗಿದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಇವೊತ್ತು ರಾಜ್ಯದಲ್ಲಿನ ಅನೇಕ ಕಡೆಗಳಲ್ಲಿನ ಪದವಿಪೂರ್ವ ಕಾಲೇಜುಗಳನ್ನು ನೋಡುತ್ತಾ ಇದ್ದೇವೆ. ಡಿಟೀರಿಯರೇಟ್ ಆಗುತ್ತಾ ಇದ್ದಾವೆ. ಅಲ್ಲಿಗೆ 10-12 ವಿದ್ಯಾರ್ಥಿಗಳು ಬರುತ್ತಾ ಇದ್ದಾರೆ. ಈ ರೀತಿ ಇರುವುದರಿಂದ ಇದನ್ನು ಪರಿಶೀಲನೆ ಮಾಡಬೇಕಾದಂಥ ಅವಶ್ಯಕತೆ ಇದೆ ಎಂಬುದನ್ನು ತಾವು ಒಪ್ಪುತ್ತೀರಿ ಎಂದು ನಾವು ಭಾವಿಸುತ್ತೇನೆ. ಏತಕ್ಕೆಂದರೆ ಜವಾಬ್ದಾರಿಯು ತಮಗೆ ಗೊತ್ತಿದೆ. ನಮ್ಮ ಕಷ್ಟ ಏನೆಂಬುದು ತಮಗೆ ಗೊತ್ತಿದೆ. ಆದ್ದರಿಂದ ಪದವಿಪೂರ್ವ ಕಾಲೇಜು ಕೊಡುವ ಅವಶ್ಯಕತೆ ಸದ್ಯದ ಪರಿಸ್ಥಿತಿಯಲ್ಲಿ ಕಷ್ಟವಾಗುತ್ತದೆ.

ಸಾಗರದ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

103 (331) ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸರ್ಕಾರದ ಸಾರ್ವಜನಿಕ ಆಸ್ಪತ್ರೆಯಲ್ಲಿ 150 ಹಾಸಿಗೆಗಳನ್ನು ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದು ನಿಜವೇ?

2) ಹಾಗಿದ್ದರೆ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?